ಈ ಮಾತು ಗೀತಾರ ಜೀವನಕ್ಕೂ ಅನ್ವಯಿಸುತ್ತದೆ.

ಒಬ್ಬ ಸಾಮಾಜಿಕ ಕಾರ್ಯಕರ್ತೆಯ ಕೆಲಸಕ್ಕೆ ಒಂದು ವಿಚಾರಧಾರೆಯ ಲೇಪದ ಚೌಕಟ್ಟು ಬೇಕೇ ಎನ್ನುವ ಪ್ರಶ್ನೆಗಳನ್ನು ಗೀತಾರ ಪುಸ್ತಕ ಪರೋಕ್ಷವಾಗಿ ಎತ್ತುತ್ತದೆ. ಗೀತಾರ ಜೀವಿತಕಾಲದ ಕೆಲಸದಲ್ಲಿ ಎರಡು ಆಯಾಮಗಳಿವೆ. ಮೊದನಲೆಯದಾಗಿ, 'ಹೈದರಾಬಾದ್ ಬುಕ್ ಟ್ರಸ್ಟ್' ಎನ್ನುವ ಪ್ರಕಾಶನ ಸಂಸ್ಥೆಯ ಸ್ಥಾಪಕ–ನಿರ್ವಾಹಕರಾಗಿ ಅವರು ಜನಪರ ಪುಸ್ತಕಗಳನ್ನು ಪ್ರಕಟಿಸುವ, ವಿವಿಧ ಭಾಷೆಗಳಿಂದ ತೆಲುಗಿಗೆ ಅನುವಾದ ಮಾಡಿಸುವ ಕೆಲಸವನ್ನು ಮಾಡುತ್ತಾರೆ. ಇದು ಒಂದು ಬೌದ್ಧಿಕ ಚೌಕಟ್ಟಿನಲ್ಲಿ ವಿಚಾರಧಾರೆಯೊಂದಿಗೆ ಏಗುವ ಕೆಲಸ. ಆದರೆ, ಅವರು ಜನರ ನಡುವೆ ಕೆಲಸ ಮಾಡುವಾಗ, ಜನರನ್ನು ಜೀತಪದ್ಧತಿಯಿಂದ ಬಿಡಿಸುವಾಗ, ಭೂ ಸುಧಾರಣೆಯ ಕಾಯಿದೆಯನ್ವಯ ಜಮೀನಿನ ಪಟ್ಟಾವನ್ನು ಬಡವರಿಗೆ–ದಲಿತರಿಗೆ ತಲುಪುವಂತೆ ಅವರ ಜೊತೆ ನಿಂತು ಹೋರಾಡುವಾಗ, ಇವೆಲ್ಲವೂ ಆಯಾ ಕ್ಷಣಗಳ ಘರ್ಷಣೆಯಾಗಿ ಕಾಣುತ್ತದೆಯೇ ಹೊರತು ಅದರ ಹಿಂದಿರಬಹುದಾದ ಮಾರ್ಕ್ಸ್‌ವಾದ ಅಥವಾ ಅಂಬೇಡ್ಕರ್‌ವಾದ ನಮಗೆ ಕಾಣುವುದಿಲ್ಲ. ಆ ವಿಚಾರಧಾರೆಯನ್ನು ಆಕೆ ಹಿಂದಕ್ಕಟ್ಟಿದ್ದಾರೆ ಎನ್ನುವಂತೆಯೂ ಇಲ್ಲ. ಬದಲಿಗೆ ಆ ಕ್ಷಣಕ್ಕೆ ಸಮರ್ಪಕವಾದ ಕ್ರಮವನ್ನು ಕೈಗೊಳ್ಳಬೇಕಾದಾಗ, ವಿಚಾರಧಾರೆಯಲ್ಲಿ ಆ ಘಟನೆಯನ್ನು ಅರೆದು ನೋಡುವ ಯತ್ನವನ್ನು ಗೀತಾ ಮಾಡುವುದಿಲ್ಲ. ಹೀಗಾಗಿಯೇ ಗೀತಾ ಏನನ್ನು ಪ್ರತಿನಿಧಿಸುತ್ತಾರೆ ಎನ್ನುವ ಚೌಕಟ್ಟು ಸಿಗದೇ ನಮಗೆ ತುಸು ತಳಮಳವಾಗುತ್ತದೆ. ಪುಸ್ತಕಗಳನ್ನು ಪ್ರಕಟಿಸುವ, ವಿಚಾರವಾದದ ಲೋಕದಲ್ಲೇ ಸಂಚರಿಸುವ ಅವರಿಗೆ ಅದರ ಸೋಂಕು ಹತ್ತದಿರುವ ಈ ದ್ವಂದ್ವ ನಮಗೆ ತುಸು ತಳಮಳವನ್ನುಂಟು ಮಾಡುವುದು ಸಹಜವೇ.

ಹೋರಾಟಗಾರರಾಗಿ ಅವರ ಜೀವನವನ್ನು ನಾವು ಅವಲೋಕಿಸಿದಾಗ ನಮಗೆ ಕಾಣುವುದು ಮೂರು ಭಿನ್ನ ಘಟ್ಟಗಳು. ವಿದ್ಯಾರ್ಥಿ ದೆಸೆಯಲ್ಲಿ ಮನೆ ಮತ್ತು ಸಂಸಾರ, ಹುಟ್ಟಿದ ಜಾತಿಯ ವಿರುದ್ಧ ಸಿಡಿದು ತಮ್ಮದೇ ದಾರಿಯನ್ನು ಕಂಡುಕೊಳ್ಳುವ ಬಂಡೇಳುವ ಘಟ್ಟ, ನಕ್ಸಲೀಯರ ಜೊತೆ ಸೇರಿ, ತುರ್ತುಪರಿಸ್ಥಿತಿಯಲ್ಲಿ ಅಂಡರ್‌ಗ್ರೌಂಡ್ ಆಗುವ ಎರಡನೇ ಘಟ್ಟ, ಮತ್ತು ಇಬ್ರಾಹಿಂಪಟ್ಟಣದಲ್ಲಿ ವ್ಯವಸಾಯ ಕೂಲಿಗಳ ಸಂಘವನ್ನು ಏರ್ಪಡಿಸಿ ಅವರುಗಳ ಹಕ್ಕುಗಳಿಗಾಗಿ ಅವರೊಂದಿಗೆ ಕೂಡಿ ಕೆಲಸ ಮಾಡುವ ಮೂರನೆಯ ಘಟ್ಟ. ಈ ಮೂರನೇ ಘಟ್ಟದಲ್ಲಿ ಪರ್ಯಾಯವಾಗಿ ಪುಸ್ತಕ ಪ್ರಕಾಶನದ ಕೆಲಸವನ್ನೂ ಅವರು ಹಚ್ಚಿಕೊಳ್ಳುತ್ತಾರೆ. ಈ ಎಲ್ಲ ಕೆಲಸಗಳನ್ನು ಮಾಡುತ್ತಲೇ ಒಂದು ಚೌಕಟ್ಟನ್ನು ಹೇರಿಕೊಳ್ಳದ ಬಿಂದಾಸ್ ಮಹಿಳೆಯಾಗಿ ಗೀತಾ ಕಾಣಿಸುತ್ತಾರೆ. ಇಳಾ ಭಟ್ ಹೇಳಿದಂತಹ ಸಮಸ್ಯೆಯಿಂದ ಪರಿಹಾರ – ಅದರೊಂದಿಗೆ ಮತ್ತೊಂದು ಸಮಸ್ಯೆಯನ್ನು ಎದುರಿಸುತ್ತಾ ನಿರಂತರವಾಗಿ ಹೋರಾಡುತ್ತಾ ಮುಂದುವರೆಯುತ್ತಾರೆ. ಈ ಹೋರಾಟದಡಿಯಲ್ಲಿ ಒಂದು ವಿಚಾರಧಾರೆ ಇದ್ದಿದ್ದಾದರೆ ನಮಗೆ ಕೆಲವು ನಿಲುವುಗಳು ಕಾಣಿಸುತ್ತಿದ್ದುವು. ಪ್ರತಿಭಟನೆಯ ಸ್ವರೂಪವೇನಿರಬೇಕು. ಅದರಲ್ಲಿ ಹಿಂಸೆಯ ಪಾತ್ರ ಏನು? ಕಾನೂನಿನ ಚೌಕಟ್ಟಿನಲ್ಲಿ ಕೋರ್ಟು ಕಟ್ಟಲೆಗಳ ಮೂಲಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕೇ – ರಾಜಿ ಯಾವಾಗ ಮಾಡಿಕೊಳ್ಳಬೇಕು? ಈ ಎಲ್ಲವೂ ನಾವು ಕೇಳಿಕೊಳ್ಳಬೇಕಾದ ಪ್ರಶ್ನೆಗಳು. ಒಂದು ವಿಚಾರಧಾರೆಯ ಅಡಿಪಾಯವಿದ್ದರೆ ಅದರಲ್ಲೇ ಮಾರ್ಗಗಳೂ ಕಾಣಿಸುತ್ತವೆ. ಮಾರ್ಕ್ಸ್‌ವಾದ–ಲೆನಿನ್‌ವಾದದ ಚೌಕಟ್ಟನ್ನು ಹಿಡಿದಾಗ ಶತ್ರುವು ಸರ್ಕಾರ ಮತ್ತು ಆಡಳಿತ ಯಂತ್ರಾಂಗವಾಗುತ್ತದೆ. ಶೋಷಿಸುವವರ ವಿರುದ್ಧ ಹಿಂಸೆಯನ್ನು ಈ ಮಾರ್ಗ ಪ್ರತಿಪಾದಿಸುತ್ತದೆ. ಗಾಂಧಿ ಮಾರ್ಗ ಅಹಿಂಸೆಯ ಅಸಹಕಾರದ ದಾರಿಯನ್ನು ತೋರಿಸುತ್ತದೆ. ಅಂಬೇಡ್ಕರ್ ಮಾರ್ಗ ಸಂವಿಧಾನವನ್ನು ಚೌಕಟ್ಟಾಗಿಟ್ಟುಕೊಂಡು ಹಕ್ಕುಗಳ ಹೋರಾಟಕ್ಕೆ ಪ್ರೇರೇಪಿಸುತ್ತದೆ. ಆದರೆ, ಗೀತಾ ತಮ್ಮ ಹೋರಾಟದಲ್ಲಿ ಯಾವುದೇ ಚೌಕಟ್ಟಿಗೆ ಬದ್ಧರಾಗುವುದಿಲ್ಲ. ಆ ಸಮಯಕ್ಕೆ, ಸಂದರ್ಭಕ್ಕೆ ಸೂಕ್ತವೆನ್ನಿಸಿದ್ದನ್ನು (ಹಿಂಸೆ ಮತ್ತು ಒಂದೆರಡು ಬಾರಿ ಹತ್ಯೆಯನ್ನೂ) ಪ್ರತಿಪಾದಿಸುತ್ತಾರೆ. ಹಿಂಸೆಯ ಪ್ರತಿಪಾದನೆ ತೀವ್ರ ಚಡಪಡಿಕೆಯಿಂದ ಬರುತ್ತದಾದರೂ, ಒಂದು